ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 894

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 20.09.2021

ಉತ್ತರಿಸುವ ಸಚಿವರು : ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳನ್ನು ಸರಬರಾಜು ಮಾಡುವಾಗ ಆಹಾರ ಕಳ್ಳಸಾಗಣಿಕೆ ಹಾಗೂ ಆಹಾರ ಸೋರಿಕೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;	ಪಡಿತರ ಧಾನ್ಯಗಳು ಕಾಳಸಂತೆ ಕೋರರ ಕೈ ಸೇರದಂತೆ ತಡೆಯಲು ಸರ್ಕಾರವು ಸಕಾರಾತ್ಮಕ ಮತ್ತು ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿದೆ. ಯಾವುದೇ ಪಡಿತರ ಧಾನ್ಯಗಳ ಕಾಳಸಂತೆ ಮಾಡುವವರನ್ನು ಪತ್ತೆಹಚ್ಚಿ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಆಹಾರ ಇಲಾಖೆಯಲ್ಲಿ ಪ್ರತಿ ಪಡಿತರ ಚೀಟಿದಾರರ ಮಾಹಿತಿಯನ್ನು ಗಣಕೀಕರಣ ಮಾಡಲಾಗಿದೆ. ಪಡಿತರವನ್ನು ಪಡಿತರ ಚೀಟಿದಾರರ ಜೀವಮಾಪಕ ದೃಢೀಕರಣದ ಮೂಲಕ ವಿತರಿಸಲಾಗುತ್ತಿದೆ. ಪಡಿತರ ವಿತರಣೆ ವಿವರಗಳನ್ನು ಯಾವುದೇ ಸಾರ್ವಜನಿಕರು ನೈಜವೇಳೆ ಆಧಾರದಲ್ಲಿ ಇಲಾಖೆಯ ವೆಬ್ ಸೈಟ್ ನಿಂದ ಪರಿಶೀಲಿಸಬಹುದು. ಹಾಗೂ ಪ್ರತಿ ಪಡಿತರ ಚೀಟಿದಾರರಿಗೆ ತಮ್ಮ ಪಡಿತರ ಹಕ್ಕಿನ ಬಗ್ಗೆ ಪ್ರತಿ ತಿಂಗಳು ಮೊಬೈಲ್‌ಗೆ ಸಂಕ್ಷಿಪ್ತ ಸಂದೇಶಗಳನ್ನು ಕಳುಹಿಸಿಕೊಡಲಾಗುತ್ತಿದೆ. ಈ ಉದ್ದೇಶಕ್ಕಾಗಿ ಇಲಾಖೆಯಲ್ಲಿ ರಾಜ್ಯ ಮಟ್ಟದ ಆಹಾರ ಜಾಗೃತಿ ಮತ್ತು ತನಿಖಾ ದಳವನ್ನು ರಚಿಸಲಾಗಿದೆ. ಅದರಂತೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಅವರ ನೇತೃತ್ವದಲ್ಲಿ ನಿರಂತರ ತನಿಖೆಗಳು ನಡೆಯುತ್ತಿವೆ. ಹಾಗೂ ಪಡಿತರ ಧಾನ್ಯಗಳ ನ್ಯಾಯಯುತ ವಿತರಣೆ ಮೇಲ್ವಿಚಾರಣೆಗಾಗಿ ಪ್ರತಿ ನ್ಯಾಯಬೆಲೆ ಅಂಗಡಿ

<table>
<tr><td></td><td></td><td>ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಜಾಗೃತಿ ಸಮಿತಿಗಳನ್ನು ರಚಿಸಲಾಗಿದ್ದು ಈ ಸಮಿತಿಗಳು ಸಹ ಪಡಿತರ ಹಂಚಿಕೆ ಮತ್ತು ವಿತರಣೆಗೆ ಸಂಬಂಧಿಸಿದ ದೂರುಗಳನ್ನು ಪರಿಶೀಲಿಸುತ್ತವೆ. ಪಡಿತರ ವಸ್ತುಗಳ ಅಕ್ರಮ ವಹಿವಾಟು ಮತ್ತು ಕಾಳಸಂತೆ ವ್ಯವಹಾರದಲ್ಲಿ ತೊಡಗುವ ವ್ಯಾಪಾರಸ್ಥರು ಮತ್ತು ಕಾಳಸಂತೆಕೋರರ ವಿರುದ್ಧ ಅಗತ್ಯ ವಸ್ತುಗಳ ಕಾಯಿದೆಯಡಿಯಲ್ಲಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ.</td></tr>
<tr><td>(ಆ)</td><td>ಇಲಾಖೆಯ ಕಣ್ತಪ್ಪಿಸಿ ಮಂಡ್ಯ ಜಿಲ್ಲೆಯ ಗಿರಣಿಗಳಿಂದ ಅಕ್ಕಿ ಸಾಗಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಪ್ರಕರಣದಲ್ಲಿ ಶಾಮೀಲಾಗಿದ್ದ ಯಾವ ಯಾವ ಅಧಿಕಾರಿಗಳ ಮೇಲೆ ಯಾವ್ಯಾಯ ಕ್ರಮಕೈಗೊಳ್ಳಲಾಗಿದೆ;</td><td>ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಅಕ್ಕಿ ಗಿರಣಿ ಹಂತದಲ್ಲಿ ಸಂಗ್ರಹಿಸಲಾದ 22,285 ಕ್ವಿಂ ಭತ್ತವನ್ನು ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು ಹರಳಹಳ್ಳಿ ಗ್ರಾಮದ ಎಂ.ಆರ್ ರೈಸ್ ಇಂಡಸ್ಟ್ರೀಸ್ ಮಾಲೀಕರು ಅನಧಿಕೃತವಾಗಿ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸದರಿ ಅಕ್ಕಿ ಗಿರಣಿ ಮಾಲೀಕರ ವಿರುದ್ಧ ಪಾಂಡವಪುರ ಪೋಲಿಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಾಗಿರುತ್ತದೆ. ಹಾಗೂ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಇವರು ನ್ಯಾಯಾಲಯದಲ್ಲಿ ಅಗತ್ಯ ವಸ್ತು ಕಾಯ್ದೆ 1955 ರಡಿ ಪ್ರಕರಣ ದಾಖಲಾಗಿರುತ್ತದೆ.</td></tr>
<tr><td>(ಇ)</td><td>ಕಳೆದ 2 ವರ್ಷಗಳಲ್ಲಿ ಆಹಾರ ಕಳ್ಳಸಾಗಾಣಿಕೆಯಡಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು; ಅವು ಯಾವುವು;</td><td>ಕಳೆದ 2 ವರ್ಷಗಳಲ್ಲಿ ಆಹಾರ ಕಳ್ಳ ಸಾಗಾಣಿಕೆಯಡಿ ದಾಖಲಾದ ಪ್ರಕರಣಗಳ ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.</td></tr>
<tr><td>(ಈ)</td><td>2020 ಹಾಗೂ 2021ರ ಲಾಕ್ ಡೌನ್ ಸಮಯದಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರದಾರರಿಗೆ ನೀಡಿದ ಆಹಾರ ಧಾನ್ಯಗಳ ಪ್ರಮಾಣವೆಷ್ಟು;</td><td>ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಪಡಿತರ ಫಲಾನುಭವಿಗಳಿಗೆ ಈ ಕೆಳಗಿನ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ.
<table>
<tr><th>ವರ್ಗ</th><th>ಅಕ್ಕಿ</th><th>ಗೋಧಿ</th><th>ದರ</th></tr>
<tr><td>ಅಂತ್ಯೋದಯ</td><td>35 ಕೆ.ಜಿ (ಪ್ರತಿ ಚೀಟಿಗೆ)</td><td>ಇಲ್ಲ</td><td>ಉಚಿತ</td></tr>
<tr><td>ಆದ್ಯತಾ</td><td>5 ಕೆ.ಜಿ (ಪ್ರತಿ ಪಡಿತರ ಚೀಟಿ ಸದಸ್ಯರಿಗೆ)</td><td>2 ಕೆ.ಜಿ (ಪ್ರತಿ ಪಡಿತರ ಚೀಟಿಗೆ)</td><td>ಉಚಿತ</td></tr>
</table></td></tr>
</table>

ಆದ್ಯತೇತರ	ಪಡಿತರ ಪಡೆಯಲು ನೋಂದಾಯಿಸಿರುವ ಪ್ರತಿ ಪಡಿತರ ಚೀಟಿಗೆ 10 ಕೆ.ಜಿ ಅಕ್ಕಿ (2 ಅಥವಾ ಹೆಚ್ಚಿನ ಸದಸ್ಯರ ಪಡಿತರ ಚೀಟಿಗೆ) 5 ಕೆ.ಜಿ ಅಕ್ಕಿ (ಏಕ ಸದಸ್ಯ ಪಡಿತರ ಚೀಟಿಗೆ)	ಇಲ್ಲ	ಪ್ರತಿ ಕೆ.ಜಿ ಗೆ ರೂ.15 ರಂತೆ

ಇದರೊಂದಿಗೆ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ 2020ರ ಏಪ್ರಿಲ್ ರಿಂದ 2020ರ ನವೆಂಬರ್ ಮಾಹೆಯವರೆಗೆ ಹಾಗೂ 2021ರ ಮೇ ಯಿಂದ ನವೆಂಬರ್ 2021ರವರೆಗ ಆದ್ಯತಾ ಹಾಗೂ ಅಂತ್ಯೋದಯ ಪಡಿತರ ಚೀಟಿಗೆ ಪ್ರತಿ ಫಲಾನುಭವಿಗೆ 5 ಕೆ.ಜಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ಪ್ರತಿ ಪಡಿತರ ಚೀಟಿಗೆ 1ಕೆಜಿ ತೊಗರಿಬೇಳೆ/ಕಡಲೇಕಾಳು ಹಾಗೂ ಆತ್ಮನಿರ್ಭರ್ ಭಾರತ(ಎ.ಎನ್.ಬಿ) ಯೋಜನೆಯಡಿ ಮೇ 2020 ಮತ್ತು ಜೂನ್ 2020 ಮಾಹೆಯಲ್ಲಿ ವಲಸೆ ಕಾರ್ಮಿಕರಿಗೆ 5 ಕೆ.ಜಿ. ಅಕ್ಕಿ ಹಾಗೂ 1 ಕೆ.ಜಿ ಕಡಲೇಕಾಳನ್ನು ಉಚಿತವಾಗಿ ವಿತರಿಸಲಾಗಿದೆ.

ಲಾಕ್‌ಡೌನ್ ಹಿನ್ನಲೆಯಲ್ಲಿ 2020ರ ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳಲ್ಲಿ ಹಾಗೂ 2021ರ ಮೇ ಮತ್ತು ಜೂನ್ ತಿಂಗಳುಗಳಲ್ಲಿ ಹೊಸ ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸಿದ 'ಆದ್ಯತಾ ಪಡಿತರ ಅರ್ಜಿದಾರರಿಗೆ 10ಕೆ.ಜಿ ಅಕ್ಕಿ ಉಚಿತವಾಗಿ ಮತ್ತು ಪಡಿತರ ಪಡೆಯಲು ಇಚ್ಛೆಯನ್ನು ವ್ಯಕ್ತಪಡಿಸಿ ಆದ್ಯತೇತರ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ 10ಕೆ.ಜಿ ಅಕ್ಕಿಯನ್ನು ಪ್ರತಿ ಕೆ.ಜಿ.ಗೆ ರೂ.15/-ರ ದರದಲ್ಲಿ ವಿತರಿಸಲಾಗಿದೆ.

		ರಾಜ್ಯದ ಎಲ್ಲಾ ಆದ್ಯತೇತರ ಪಡಿತರ ಚೀಟಿದಾರರಿಗೆ ಮೇ ಮತ್ತು ಜೂನ್ 2020 ರಲ್ಲಿ 14.82ಲಕ್ಷ ಆದ್ಯತೇತರ ಏಕ ಸದಸ್ಯ ಪಡಿತರ ಚೀಟಿಗೆ 5ಕೆ.ಜಿ ಮತ್ತು ಒಬ್ಬರಿಗಿಂತ ಹೆಚ್ಚಿನ ಸದಸ್ಯರಿರುವ ಪಡಿತರ ಚೀಟಿಗೆ 10ಕೆ.ಜಿ ಅಕ್ಕಿಯನ್ನು ಪ್ರತಿ ಕೆ.ಜಿ.ಗೆ ರೂ.15/- ರ ದರದಲ್ಲಿ ವಿತರಿಸಲಾಗಿದೆ.
(ಉ)	2020 ಹಾಗೂ 2021ರಲ್ಲಿ ಕೇಂದ್ರ ಸರ್ಕಾರದ "ಗರೀಬ್ ಕಲ್ಯಾಣ" ಯೋಜನೆಯಡಿ ರಾಜ್ಯದ ಎಷ್ಟು ಪಡಿತರಿಗೆ, ಎಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ವಿತರಿಸಲಾಗಿದೆ; (ಈ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು)	ಕೇಂದ್ರ ಸರ್ಕಾರದ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ 2020 ಸಾಲಿನಲ್ಲಿ ಏಪ್ರಿಲ್ 2020 ರಿಂದ 2020ರ ನವೆಂಬರ್ ಮಾಹೆಯವರೆವಿಗೂ ಪ್ರತಿ ಎ.ಎ.ವೈ ಮತ್ತು ಆದ್ಯತಾ ಫಲಾನುಭವಿಗೆ ಪ್ರತಿ ಮಾಹೆ 5 ಕೆ.ಜಿ ಅಕ್ಕಿಯನ್ನು ಹಾಗೂ 1ಕೆ.ಜಿ ತೊಗರಿಬೇಳೆ/ ಕಡಲೇಕಾಳನ್ನು ವಿತರಿಸಲಾಗಿತ್ತು. ಒಟ್ಟು 15,65,437 ಎಂ.ಟಿ ಅಕ್ಕಿ, 38,168.184 ಎಂ.ಟಿ ತೊಗರಿಬೇಳೆ ಹಾಗೂ 63,613.650 ಎಂ.ಟಿ ಕಡಲೇಕಾಳು ವಿತರಿಸಲಾಗಿದೆ. 2021 ನೇ ಸಾಲಿನಲ್ಲಿ : ಮೇ-2021 ರಿಂದ ಸೆಪ್ಟೆಂಬರ್ 2021 ರವರೆಗೆ ಆದ್ಯತಾ ಕುಟುಂಬದ(ಎಎವೈ + ಪಿಹೆಚ್ ಹೆಚ್) ಪ್ರತಿ ಸದಸ್ಯರಿಗೆ 5 ಕೆ.ಜಿ. ಅಕ್ಕಿ ಉಚಿತವಾಗಿ ವಿತರಿಸಲಾಯಿತು. ರಾಜ್ಯಕ್ಕೆ ಕೇಂದ್ರದಿಂದ ಬಿಡುಗಡೆಯಾದ ಪ್ರತಿ ಮಾಹೆಯ ಅಕ್ಕಿ ಪ್ರಮಾಣ 200965 ಮೆಟ್ರಿಕ್ ಟನ್ ರೊಂದಿಗೆ ಹೆಚ್ಚುವರಿ ಬೇಡಿಕೆಗಾಗಿ 55152.417 ಮೆಟ್ರಿಕ್ ಟನ್ ಓಎಂಎಸ್ಎಸ್ ಅಕ್ಕಿಯನ್ನು ಖರೀದಿಸಿ ಒಟ್ಟು 10,59,977.417 ಮೆಟ್ರಿಕ್ ಟನ್ ಪ್ರಮಾಣದ ಅಕ್ಕಿಯನ್ನು ವಿತರಿಸಲಾಗಿದೆ.
(ಊ)	ಬಿ.ಪಿ.ಎಲ್. ಹಾಗೂ ಎ.ಪಿ.ಎಲ್. ಪಡಿತರ ಚೀಟಿ ಪಡೆಯಲು ಅನುಸರಿಸುವ ಮಾನದಂಡಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಿ ಆದ್ಯತೇತರ ಕುಟುಂಬಗಳನ್ನು ಗುರುತಿಸಿ ಪಡಿತರ ಚೀಟಿ ವಿತರಿಸಲಾಗುತ್ತಿದೆ. 1. ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ, ಸರ್ಕಾರದ ಅಥವಾ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ ನಿಗಮಗಳು/ ಸ್ವಾಯತ್ತ

		ಕುಟುಂಬಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ ಸೇವಾ ತೆರಿಗೆ/ ವ್ಯಾಟ್/ ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು. 2. ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ನಗರ ಪ್ರದೇಶದಲ್ಲಿ 1000 ಚದರಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು. 3. ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ, ನಾಲ್ಕು ಚಕ್ರದ ವಾಹನವನ್ನು ಹೊಂದಿರುವ ಎಲ್ಲಾ ಕುಟುಂಬಗಳು. 4. ಕುಟುಂಬದ ವಾರ್ಷಿಕ ಆದಾಯವು ರೂ. 1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು. ಮೇಲಿನ ಮಾನದಂಡಗಳಿಗೆ ಒಳಪಡುವ ಕುಟುಂಬಗಳಿಗೆ ಎ.ಪಿ.ಎಲ್ ಪಡಿತರ ಚೀಟಿಗಳನ್ನು ನೀಡಲಾಗುತ್ತಿದೆ.
(ಉ)	ಸದ್ಯ ರಾಜ್ಯದಲ್ಲಿ ವಿತರಿಸಲಾಗುತ್ತಿರುವ ಪ್ರತಿಯೊಬ್ಬ ಪಡಿತರದಾರರಿಗೆ ಆಹಾರ ಧಾನ್ಯಗಳು ಹಾಗೂ ನೀಡುವ ಪ್ರಮಾಣದ ಬಗ್ಗೆ ಮಾಹಿತಿ ನೀಡುವುದು?	"ಇ" ರಲ್ಲಿ ಉತ್ತರವನ್ನು ಒದಗಿಸಲಾಗಿದೆ.

ಆನಾಸ 85 ಆರ್‌ಪಿಆರ್ 2021 (ಇ-ಆಫೀಸ್)

(ಉಮೇಶ ವಿ. ಕತ್ತಿ)
ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು

LCQ 894 1

Annexure to LCQ 894

ಮಂಡ್ಯ ಜಿಲ್ಲೆಯಲ್ಲಿ ಅಗತ್ಯ ವಸ್ತು ಕಾಯ್ದೆಯಡಿ 2020-21ನೇ ಸಾಲಿನಲ್ಲಿ ದಾಖಲಾಗಿರುವ ಪ್ರಕರಣಗಳ ವಿವರ

ಕ್ರ.ಸಂ	ಸಾಲು		ಕಡತ ಸಂಖ್ಯೆ	ತಾಲ್ಲೂಕು	ಎಫ್‌ಐಆರ್ ಸಂಖ್ಯೆ	ವಿಷಯ	ಜಪ್ತಿ ಮಾಡಿದ ದಾಸ್ತಾನು ಅಕ್ಕಿ / ಇತರೆ (ಕ್ವಿಂ.ಗಳಲ್ಲಿ)
1	2020-21		ಆಹಾರ/ಇಸಿ/ಸಿಆರ್/01/2020-21	ನಾಗಮಂಗಲ ತಾಲ್ಲೂಕು	ನಾಗಮಂಗಲ ಟೌನ್ ಪೊಲೀಸ್ ಠಾಣೆ ಮೊ.ಸಂ-112/2020	ನಾಗಮಂಗಲ ಟೌನ್ ಪೊಲೀಸ್ ಠಾಣೆ ವ್ಯಾಪ್ತಿಯ ಮಂಡ್ಯ ಸರ್ಕಲ್ ಬಳಿ ಅಕ್ರಮವಾಗಿ ಅನ್ನಭಾಗ್ಯ ಅಕ್ಕಿ ಸಾಗಿಸುತ್ತಿದ್ದು ತಡೆದು ಪ್ರಕರಣದ ದಾಖಲಿಸಿರುವ ಬಗ್ಗೆ.	112.1
2	2020-21	ನವೆಂಬರ್-20	ಆಹಾರ/ಇಸಿ/ಸಿಆರ್/02/2020-21	ಮದ್ದೂರು ತಾಲ್ಲೂಕು	ಮದ್ದೂರು ಟೌನ್ ಪೊಲೀಸ್ ಠಾಣೆ ಮೊ.ಸಂ-276/2020	ಮದ್ದೂರು ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯ ಶಿವಪುರದ ಬಳಿ ಅಕ್ರಮ ಅಕ್ಕಿ ಸಾಗಣೆ ಮಾಡುತ್ತಿದ್ದ ವಾಹನ ಸಂಖ್ಯೆಕೆಎ-11-ಬಿ-2368 ನ್ನು ತಡೆದು ಪ್ರಕರಣ ದಾಖಲಿಸಿರುವ ಬಗ್ಗೆ.	32.68
3	2020-21	ನವೆಂಬರ್-20	ಆಹಾರ/ಇಸಿ/ಸಿಆರ್/04/2020-21	ಶ್ರೀರಂಗಪಟ್ಟಣ ತಾಲ್ಲೂಕು	ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆ ಮೊ.ಸಂ- 242/2020	ಶ್ರೀರಂಗಪಟ್ಟಣ ಟೌನ್ ಪಶ್ಚಿಮ ವಾಹಿನಿ ಬಳಿ ಅಕ್ರಮವಾಗಿ ಸಾಗಿಸುತ್ತಿದ್ದ ಅಕ್ಕಿಯನ್ನು ವಶಪಡಿಸಿಕೊಂಡಿರುವ ಬಗ್ಗೆ.	38.00
4	2020-21	ನವೆಂಬರ್-20	ಆಹಾರ/ಇಸಿ/ಸಿಆರ್/03/2020-21	ಮಂಡ್ಯ ತಾಲ್ಲೂಕು	ಕೆರಗೋಡು ಪೊಲೀಸ್ ಠಾಣೆ ಮೊ.ಸಂ-187/2020	ಕೆರಗೋಡು ಪೊಲೀಸ್ ಠಾಣೆ ಮೊ.ಸಂ:187/2020ರ ರೀತ್ಯಾ ಅಮ್ಮ ರೈಸ್ ಮಿಲ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದು ಅಕ್ಕಿ ವಶಪಡಿಸಿಕೊಂಡಿರುವ ಬಗ್ಗೆ.	122.88
5	2020-21	ಜನವರಿ-21	ಆಹಾರ/ಇಸಿ/ಸಿಆರ್/05/2020-21	ಮಂಡ್ಯ ತಾಲ್ಲೂಕು	ಮಂಡ್ಯ ಗ್ರಾಮಾಂತರ ಠಾಣೆ. ಮೊ.ಸಂ.38/2021	ಮಂಡ್ಯ ತಾಲ್ಲೂಕು ಕಿರಗಂದೂರು ಜೈಸಂಕರ್ ರೈಸ್‌ಮಿಲ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದು ಅಕ್ಕಿ ವಶಪಡಿಸಿಕೊಂಡಿರುವ ಬಗ್ಗೆ	126.20
6	2020-21	ಜನವರಿ-21	ಆಹಾರ/ಇಸಿ/ಸಿಆರ್/06/2020-21	ಮಳವಳ್ಳಿ ತಾಲ್ಲೂಕು	ಮಳವಳ್ಳಿ ಗ್ರಾಮಾಂತರ ಠಾಣೆ. ಮೊ.ಸಂ.15/2021	ಮಳವಳ್ಳಿ ತಾಲ್ಲೂಕು. ಮಾರೇಹಳ್ಳಿ ಗ್ರಾಮದ ರಸ್ತೆಯಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ಅಕ್ಕಿಯನ್ನು ವಶಪಡಿಸಿಕೊಂಡಿರುವ ಬಗ್ಗೆ	8.06
7	2020-21	ಜನವರಿ-21	ಆಹಾರ/ಇಸಿ/ಸಿಆರ್/07/2020-21	ಮಳವಳ್ಳಿ ತಾಲ್ಲೂಕು	ಮಳವಳ್ಳಿ ಗ್ರಾಮಾಂತರ ಠಾಣೆ. ಮೊ.ಸಂ.0033/2021	ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಣಿಕೆ ಮಾಡುವಾಗ ವಶಕ್ಕೆ ಪಡೆದು ಪ್ರಕರಣ ದಾಖಲಿಸಿರುವ ಬಗ್ಗೆ.	10.27
8	2020-21	ಫೆಬ್ರವರಿ-2021	-	-	-	-	0.00
9	2020-21	ಮಾರ್ಚ್-2021	-	-	-	-	0.00
				ಒಟ್ಟು			450.19

ಮಂಡ್ಯ ಜಿಲ್ಲೆಯಲ್ಲಿ ಅಗತ್ಯ ವಸ್ತು ಕಾಯ್ದೆಯಡಿ 2021-22ನೇ ಸಾಲಿನಲ್ಲಿ ದಾಖಲಾಗಿರುವ ಪ್ರಕರಣಗಳ ವಿವರ

ಕ್ರ.ಸಂ	ಸಾಲು	ಮಾಹೆ	ಕಡತ ಸಂಖ್ಯೆ	ತಾಲ್ಲೂಕು	ಎಫ್‌ಐಆರ್ ಸಂಖ್ಯೆ	ವಿಷಯ	ಜಪ್ತಿ ಮಾಡಿದ ದಾಸ್ತಾನು ಅಕ್ಕಿ / ಇತರೆ (ಕ್ವಿಂ.ಗಳಲ್ಲಿ)
1	2021-22	ಏಪ್ರಿಲ್-2021	ಆಹಾರ/ಇಸಿ/ಸಿಆರ್/02/2021-22	ಮದ್ದೂರು	0107/2021 ದಿ:20-04-2021	ಮದ್ದೂರು ತಾಲ್ಲೂಕು ಸೋಮನಹಳ್ಳಿ ಗ್ರಾಮದ ಬಳಿ ಅಕ್ರಮವಾಗಿ ಸಾಗಿಸುತ್ತಿದ್ದ ಅಕ್ಕಿಯನ್ನು ವಶಪಡಿಸಿಕೊಂಡಿರುವ ಬಗ್ಗೆ	27.63
2	2021-22	ಮೇ-2021	ಆಹಾರ/ಇಸಿ/ಸಿಆರ್/03/2021-22	ಪಾಂಡವಪುರ	0214/2021 ದಿ:22-05-2021	ಶ್ರೀ ಮಹದೇಶ್ವರ ಅಕ್ಕಿಗಿರಣಿ ಚಿಕ್ಕಬ್ಯಾಡರಹಳ್ಳಿ ಸರ್ಕಲ್‌ನಲ್ಲಿ ಪಾಂಡವಪುರ ತಾಲ್ಲೂಕು ಇಲ್ಲಿ ಅನಧಿಕೃತವಾಗಿ ಅಕ್ಕಿಯನ್ನು ದಾಸ್ತಾನು ಮಾಡಿರುವ ಬಗ್ಗೆ	111.5

3	2021-22	ಜೂನ್-2021	ಆಹಾರ/ಇಸಿ/ಸಿಆರ್/04/2021-22	ಪಾಂಡವಪುರ	290/2021 ದಿ:30-06-2021	ಪಾಂಡವಪುರ ತಾಲ್ಲೂಕು ಹರಳಹಳ್ಳಿ ಗ್ರಾಮದ ಎಂ.ಆರ್ ರೈಸ್ ಇಂಡಸ್ಟ್ರೀಸ್‌ನಲ್ಲಿ ದಾಸ್ತಾನು ಇಟ್ಟಿದ್ದ ಎಂಎಸ್‌ಪಿ ಯೋಜನೆಯ ಭತ್ತವನ್ನು ಮಾರಾಟ ಮಾಡಿರುವ ಬಗ್ಗೆ	22.285
4	2021-22	ಜುಲೈ-2021	-	-	-	-	0
5	2021-22	ಆಗಸ್ಟ್-2021	ಆಹಾರ/ಇಸಿ/ಸಿಆರ್/05/2021-22	ಮಂಡ್ಯ	111/2021 ದಿ:14-08-2021	ಮಂಡ್ಯ ತಾಲ್ಲೂಕು ಗೊರವಾಲೆ ಗ್ರಾಮದ ಜೈ ಮಾರುತಿ ಅಕ್ಕಿಗಿರಣಿಯಲ್ಲಿ ಅನಧಿಕೃತವಾಗಿ ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ದಾಸ್ತಾನು ಮಾಡಿರುವ ಬಗ್ಗೆ	219.43
6	2021-22	ಆಗಸ್ಟ್-2021	ಆಹಾರ/ಇಸಿ/ಸಿಆರ್/06/2021-22	ಮಂಡ್ಯ	341/2021 ದಿ:19-08-2021	ಮಂಡ್ಯ ತಾಲ್ಲೂಕು, ಚನ್ನಂಕೇಗೌಡನದೊಡ್ಡಿ ಗ್ರಾಮದ ಎಟಿಎಂ ರೈಸ್ ಇಂಡಸ್ಟ್ರೀಸ್‌ನಲ್ಲಿ ಅನಧಿಕೃತವಾಗಿ ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ದಾಸ್ತಾನು ಮಾಡಿರುವ ಬಗ್ಗೆ	149.89
					ಒಟ್ಟು		530.535